ಅವನ ಮನ ವಿಚಲಿತವಾಗಿರಲಿಲ್ಲ. ರೇವತಿಯ ಭೇಟಿಗಾಗಿ ಆತ ಉತ್ಸುಕನಾಗಿದ್ದ. ಮೆಟ್ಟಿಲು ಹತ್ತಿ ಆಕೆಯ ಕೋಣೆಗೆ ಹೋದ. ಮೂಲೆಯಲ್ಲಿದ್ದ ಕುರ್ಚಿಯ ಮೇಲೆ ರೇವತಿ ಕೆಳಗೆ ಮುಖ ಹಾಕಿಕೊಂಡು ಕುಳಿತಿದ್ದಳು. ಮಗ್ಗಲಿಗೆ ನಿಂತ ಆಕೆಯ ತಾಯಿ ಸಾಂತ್ವನ ಹೇಳುತ್ತಿದ್ದಳು. ನಿಶಿಕಾಂತನನ್ನು ನೋಡಿ ರೇವತಿಯ ದುಃಖದ ಕಟ್ಟೆ ಒಡೆಯಿತು; ಆಕೆ ಎದೆ ಬಡಿದುಕೊಂಡು ಜೋರಾಗಿ ಅಳತೊಡಗಿದಳು. ಆತ ದಿಗ್ಮೂಢನಾದ. ಅಳುವ ರೂಪದಲ್ಲಿ ರೇವತಿಯನ್ನು ಕಂಡಿದ್ದು ಇದೇ ಮೊದಲ ಸಲ. ಆಕೆ ಅಳುವುದು ಕಡಿಮೆ ಆದಾಗ, ‘‘ಇದು ಹೇಗಾಯಿತು?’’ ಎಂದು ಕೇಳಿದ. ಅಳುತ್ತಲೇ ಆಕೆ ಹೇಳಿದಳು, “ಮಗುವವನ್ನು ನೋಡಿಕೊಳ್ಳಲಿಕ್ಕೆ ಹನ್ನೆರಡು ವರ್ಷದ ಹುಡುಗಿಯನ್ನು ಇಟ್ಟುಕೊಂಡಿದ್ದೆ. ರಸ್ತೆ ದಾಟುವಾಗ, ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದು ಮಗು ದೂರ ತಳ್ಳಲ್ಪಟ್ಟಿತು. ಹುಡುಗಿಯ ತಲೆಗೆ ಪೆಟ್ಟು ಬಿದ್ದಿದೆ.” ನಿಶಿಕಾಂತ ಅನುಕಂಪದಿಂದ ಆಕೆಯ ಮಾತು ಕೇಳುತ್ತಿದ್ದ. ರೇವತಿ, ಆಕಾಶ ಹರಿದು ಮೇಲೆ ಬಿದ್ದಂತೆ ಅಳುತ್ತಿದ್ದಳು. ನಡೆದ ಘಟನೆಯನ್ನು ಮೇಲಿಂದ ಮೇಲೆ ಹೇಳುತ್ತಿದ್ದಳು. “ಆ ಹುಡುಗಿಯ ಸ್ಥಿತಿ ಹೇಗಿದೆ?” ನಿಶಿಕಾಂತ ಕೇಳಿದ. ಆಕೆಗೆ ಈ ಪ್ರಶ್ನೆ ಅನಪೇಕ್ಷಿತವಾಗಿತ್ತು. ಇದನ್ನು ಈವರೆಗೆ ಯಾರೂ ವಿಚಾರಿಸಿರಲಿಲ್ಲ. “ಆಕೆ ಇನ್ನೂ ಆಸ್ಪತ್ರೆಯಲ್ಲಿದ್ದಾಳೆ. ಆದರೆ ನಾನು ಕೂಸನ್ನು ಕಳೆದುಕೊಂಡೆ.” ಮತ್ತೆ ಅದೇ ಅಳು, ರೋಧನ.

**‘ಮೊನ್ನೆಯೆ ದೃಷ್ಟಿಬೊಟ್ಟು ಹಚ್ಚಿದ್ದೆ. ಎಷ್ಟೊಂದು ಚೆಲುವನಾಗಿ ಕಾಣುತ್ತಿದ್ದ. ನನ್ನ ಯಜಮಾನರು, ‘ಮಗು ನನ್ನನ್ನು ಹೋಲುತ್ತಿಲ್ಲ’ ಎಂದು ಅನ್ನುತ್ತಿದ್ದರು. ಆದರೆ ಮಗುವಿನ ಕಣ್ಣುಗಳು ಇವರಂತೆಯೇ ಇದ್ದವು. ಹುಡುಗಿಯೊಂದಿಗೆ ನನ್ನ ಮಗುವನ್ನು ಕಳಿಸಬಾರದಿತ್ತು, ನನ್ನದೇ ತಪ್ಪು…’**

‘‘ನಾನು ಆಕೆಯ ಜೊತೆ ಮಗುವನ್ನು ಕಳಿಸಬಾರದಿತ್ತು. ನಾನು ಬಾತ್‌ರೂಮಿನಲ್ಲಿದ್ದೆ. ಆಗ ಈ ದುರ್ಘಟನೆ ಸಂಭವಿಸಿತು. ನಾನೇ ಮಗುವನ್ನು ಸಂಭಾಳಿಸಬೇಕಾಗಿತ್ತು.” ಹದಿನೈದು ಇಪ್ಪತ್ತು ನಿಮಿಷ ಆಕೆ ನಿರಂತರವಾಗಿ ಅಳುತ್ತಲೇ ಇದ್ದಳು. ನಿಶಿಕಾಂತನಿಗೆ ಏನು ಮಾತನಾಡಬೇಕೆಂದು ಹೊಳೆಯದೆ ಸುಮ್ಮನೆ ನಿಂತಿದ್ದ. ಅಪಘಾತವಾಗಿದೆ, ಮಗುವಿನ ದುರ್ಮರಣವಾಗಿದೆ. ಈ ಕಹಿ ಸಮಾಚಾರದಿಂದ ಆತನಿಗೆ ವ್ಯಥೆ ಉಂಟಾಗಿದ್ದು ನಿಜ. ಆದರೆ ವೈಯಕ್ತಿಕವಾಗಿ ಆತನಿಗೆ ಅದು ದೊಡ್ಡ ಆಘಾತವೆಂದೇನೂ ಅನಿಸಲಿಲ್ಲ. ಹೀಗಾಗಿ ಆತ ವಿಚಲಿತನಾಗಿರಲಿಲ್ಲ. ರೇವತಿಗೆ ಅಳುವುದು ಸಹಜವಾಗಿತ್ತು. ಏಕೆಂದರೆ ಆಕೆ ತಾಯಿಯಾಗಿದ್ದಳು. ಅಳುವುದನ್ನು ಬಿಟ್ಟು ಬೇರೆ ಆಕೆಗೆ ಹೊಳೆಯುತ್ತಿರಲಿಲ್ಲ. ಕೆಳಗೆ ಮುಖ ಮಾಡಿಕೊಂಡು ನಿಶಿಕಾಂತ ಮನೆಗೆ ಮರಳಿದ. ಈಗ ಆತ ನಿಜವಾಗಿಯೂ ಅಸ್ವಸ್ಥನಾಗಿದ್ದ. ತನಗೆ ಏನು ಆಗಿದೆ ಎಂಬುದು ಆತನಿಗೆ ತಿಳಿಯಲಿಲ್ಲ. ರಾತ್ರಿಯೆಲ್ಲ ಜಾಗರಣೆ ಆಯಿತು. ಕೋಣೆಯಲ್ಲಿ ಶತಪಥ ಹಾಕುತ್ತ ವೇಳೆ ಕಳೆದ. ಮಗುವಿನ ಮರಣ ಅವನಿಗೆ ನೋವು ತರಲಿಲ್ಲ. ಆದರೆ ಬೇರೆ ಯಾವುದೋ ನೋವು ಹೃದಯದಲ್ಲಿ ಬಂದು ಮನೆ ಮಾಡಿತ್ತು. ಆತನಿಗೆ ಈ ಪ್ರಪಂಚದಲ್ಲಿ ತಾನು ಒಬ್ಬಂಟಿ ಎಂದು ಅನಿಸತೊಡಗಿತು. ಮರುದಿನ ರೇವತಿಯ ಮನೆಗೆ ಹೋದ. ರೇವತಿಯ ಕೋಣೆಯಲ್ಲಿ ಆಕೆಯ ಜೊತೆಗೆ ಗಣಪುಲೆ ಕುಳಿತಿದ್ದ. ಆಕಸ್ಮಿಕವಾಗಿ